ಶ್ರೀಮತಿ ದಮಯಂತಿ ಜೋರೇಗೌಡ :—ಇಲ್ಲಿ ನೀರಿನ ಅನುಕೂಲ ಇಲ್ಲದೆ ಇರುವುದು ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ಗಮನಕ್ಕೆ ಈಗಲಾದರೂ ತರುತಿದ್ದೇನೆ. ನಮಗೆ ಕಷ್ಟ ಇದೆಯೆಂದು ಗೌರ್ನಮೆಂಟ್‌ಗೆ ಬೇರೆ ಹೇಳಿದ್ದೇನೆ. ಅಲ್ಲಿ ನೀರಿನ ಅನುಕೂಲ ಇಲ್ಲದೆ ಇರುವುದರಿಂದ ಪೇಪೆಟ್ಸ್ ಮತ್ತು ಸ್ಪಾಫ್‌ಗೆ ತೊಂದರೆಯಾಗಿದೆ. ಇಲ್ಲಿಯವರೆಗೆ ತಮ್ಮ ಗಮನಕ್ಕೆ ಬರದೆ ಹೋದರೆ ಈಗಲಾದರೂ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿವರೆಗೆ ಬಾವಿಗೆ ಆದರೂ ಪಂಪ್‌ಸೆಟ್‌ಹಾಕಿಸಿ ನೀರಿನ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ :—ನೀರಿನ ಅನುಕೂಲ ಮಾಡಿಕೊಡಲಿಕ್ಕೆ ಆರ್ಡರ್ ಕೊಡುತ್ತೇನೆ.

ADULTERATED CHEMICAL FERTILISERS

834—SRI. S. BANGARAPPA (Sorab):—

Will the Minister for Agriculture and Forests be pleased to state:-

(*a*) whether it has come to the notice of the Government that there has been heavy adulteration in chemical manure made available to the farmers in the State .

(*b*) if so, the reasons for the same :

(*c*) the astion the Government has taken against the persons responsible for the same ?

SRI K. H. PATIL (MINISTER FOR AGRICULTURE AND FORESTS)—

(*a*) Some cases of adulteration of fertilisers have been reported.

(*b*) In view of shortage of Nitrogenous fertilisers such as Ammonium Sulphate and Urea, there is a tendency on the part of some traders to adulterate fertilisers for profiteering.

(*c*) The Fertiliser Inspectors have taken action against the persons responsible for adulteration under the provisions for the Fertiliser Control Order, 1957.

ಶ್ರೀ ಎಸ್. ಬಂಗಾರಪ್ಪ :— ಸ್ವಾಮಿ ಗೊಬ್ಬರದಲ್ಲಿ ಕಲಬೇರಿಕೆ ಆಗುವುದಕ್ಕೆ ವ್ಯಾಪಾರಸ್ಥರು ಕಾರಣ ಎಂದು ಉತ್ತರ ಕೊಟ್ಟಿದ್ದಾರೆ. ಪ್ರೈವೇಟ್ ಇಂಡಿವಿಜುಲ್ಸಿಗೆ ಕೊಟ್ಟರೆ ಈರೀತಿಯಾಗುತ್ತದೆ. ಈ ದೃಷ್ಟಿಯಿಂದ ಸೊಸೈಟಿಗಳ ಮೂಲಕ ಗೊಬ್ಬರ ವಿತರಣೆ ಮಾಡುವುದಕ್ಕೆ ಪ್ರಯತ್ನಪಟ್ಟರೆ ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲವ ?

ಶ್ರೀ ಕೆ. ಎಚ್. ಪಾಟೀಲ್ :— ಮಾನ್ಯ ಸದಸ್ಯರು ಹೇಳಿದಂತೆ ನಾನು ಈಗಾಗಲೇ ಪೂಲ್ ಆಫ್ ಫರ್ಟಿಲೈಸರ್, ನಿಂದ ವಿತರಣೆ ಆಗುವ ಗೊಬ್ಬರವನ್ನು ಆಗ್ರೋ ಸರ್ವೀಸ್ ಮುಖಾಂತರ ಮತ್ತು ಕೋಆಪರೇಟಿವ್ ಸೊಸೈಟಿ ಮುಖಾಂತರ ಮಾಡಬೇಕು, ಒಬ್ಬ ವ್ಯಕ್ತಿಗೆ ಸಹ ಕೊಡಬಾರದು ಎಂದು ಸ್ಪೆಷಲ್ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ, ಆ ಪ್ರಕಾರ ನಡೆದುಕೊಂಡು ಬಂದಿದೆ. ಪೂಲ್ ಹೊರಗೆ ಇತಕ್ಕೆ ಗೊಬ್ಬರ ಖರೀದಿ ಮಾಡಲಿಕ್ಕೆ ಅವರು ಸ್ವತಂತ್ರರಿದ್ದಾರೆ, ಕಾಯಿದೆಯಿಂದ ನಿಯಂತ್ರಣ ಮಾಡುವುದಕ್ಕೆ ಬರುವುದಿಲ್ಲ. ಯಾರಾದರೂ ಹೆಚ್ಚು ರೇಟಿನಲ್ಲಿ ಮಾರಿದರೆ ಅಥವಾ ಕಲಬೆರಕೆ ಮಾಡಿದರೆ ಅದಕ್ಕೆ ಕ್ರಮ ತೆಗೆದುಕೊಳ್ಳಲಿಕ್ಕೆ ಸ್ಪೆಕ್ಟ್ ಇನ್‌ಸ್ಪೆಕ್ಷನ್ ಕೊಟ್ಟಿದ್ದೇನೆ. ಮಂಡ್ಯ ಡಿಸ್ಟ್ರಿಕ್ಟನಲ್ಲಿ ೩-೪ ಕೋಆಪರೇಟೀವ್ ಸೊಸೈಟಿಯವರು ಹದ್ದುಮೀರಿ ವ್ಯಾಪಾರಮಾಡಿರುವುದು ನನ್ನ ಗಮನಕ್ಕೆ ಬಂದಿದೆ. ಅವರ ಮೇಲೆ ಕ್ರಮ ತೆಗೆದು ಕೊಳ್ಳುವುದಕ್ಕೆ ಈಗಾಗಲೇ ಡಿಪಾರ್ಟ್‌ಮೆಂಟಿಗೆ ತಿಳಿಸಿದ್ದೇವೆ.

ಶ್ರೀ ಎಸ್. ಬಂಗಾರಪ್ಪ :— ಈ ಕಲಬೆರಕೆ ಮಾಡಿರತಕ್ಕ ಪ್ರಕರಣಗಳಲ್ಲಿ ತಮ್ಮ ಗೊಬ್ಬರ ನಿರೀಕ್ಷಕರು ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದೀರಿ. ಯಾವರೀತಿ ಕ್ರಮ ತೆಗೆದುಕೊಂಡಿದ್ದಾರೆ ಅದರ ಮೇಲೆ ಕೇಸು ಹಾಕಿದ್ದಾರೆಯೇ ಅಥವಾ ಅವರಿಗೆ ಶಿಕ್ಷೆ ಆಗಿದೆಯೇ ?

ಶ್ರೀ ಕೆ. ಎಚ್. ಪಾಟೀಲ್ :— ಡೀಲರ್ಸ್‌ಗಳ ಬಗ್ಗೆ ಎಲ್ಲೆಲ್ಲಿ ಸಂಶಯ ಬಂದಿದೆ ಅಲ್ಲಿ ೧೩೦೦ ಸ್ಯಾಂಪಲ್ಸ್ ತೆಗೆದುಕೊಂಡು ಲ್ಯಾಬರೇಟರಿ ಟೆಸ್ಟ್‌ಗೆ ಕಳುಹಿಸಿದ್ದೇವೆ, ಅದರ ಪೈಕಿ ೮೬ ಸ್ಯಾಂಪಲ್ಸ್ ಮಾತ್ರ ಸಬ್ ಸ್ಟ್ಯಾಂಡರ್ಡ್ ಇದೆ ಮತ್ತು ಮಿಕ್ಸ್‌ಚರ್ ಇದೆ ಎಂದು ನಮ್ಮ ಜನರಿಗೆ ಬಂದಿದೆ. ೮೬ ಕೇಸುಗಳಲ್ಲಿ ಆಗಲೇ ೨ ಕೇಸುಗಳಲ್ಲಿ ಸರ್ಟಿಫಿಕೇಟುಗಳನ್ನು ಸಸ್‌ಪೆಂಡ್ ಮಾಡಿದ್ದೇವೇ, ೫ ಕೇಸುಗಳಲ್ಲಿ ಕೋರ್ಟ್‌ನಲ್ಲಿ ಕಟ್ಟಲೆಗಳನ್ನು ದಾಖಲೆಗಳನ್ನು ಮಾಡಿದ್ದೇವೆ, ೬ ಕೇಸುಗಳು ಇನ್ನೂ ಕೋರ್ಟಿಗೆ ದಾಖಲೆ ಮಾಡುವ ಸ್ಥಿತಿಯಲ್ಲಿವೆ. ಅನೇಕ ಪ್ರಕರಣಗಳಲ್ಲಿ ಲ್ಯಾಬರೇಟರಿ ಟೆಸ್ಟ್ ಕಾದು ನೋಡಲಿಕ್ಕೆ ಹತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ :— ಪ್ರೈವೇಟ್ ಇಂಡಿವಿಜುಲ್ಸ್ ನೇರವಾಗಿ ಖರೀದಿ ಮಾಡಿ ಮಾತ, ಕೇಸ್ ಹಾಕಬಹುದು ಎಂದು ಹೇಳೋಣವಾಗಿದೆ. ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ, ಸರ್ಕಾರದ ವತಿಯಿಂದ ಫ್ಯಾಕ್ಟರಿಗೆ ಸಂಬಂಧ ಬೆಳೆಸಿ, ಕಾನೂನನ್ನು ತರತಕ್ಕ ಪರಿಸ್ಥಿತಿಗೆ ತಾವು ಬಂದು ನೇರವಾಗಿ ಸರ್ಕಾರದ ವತಿಯಿಂದ ಸೊಸೈಟಿಗಳ ಮುಖಾಂತರ ಮಾತ್ರ ಮಾರಾಟಮಾಡಬೇಕು. ಇಂಡಿವಿಜುಯಲ್‌ಗೆ ಕೊಡಬಾರದು ಎಂದು ಕಾನೂನು ತರುತ್ತೀರಾ ಅಥವಾ ಇದರ ಬಗ್ಗೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ ;— ಸರ್ಕಾರದ ನಿಯಂತ್ರಣ, ಸಬ್ ಸ್ಟ್ಯಾಂಡರ್ಡ್ ಆಗದಂತೆ ನೋಡಿ ಕೊಳ್ಳುವುದು, ಮಂತ್ರು ಬೆಲೆ ಮಾತ್ರ ಕೇಂದ್ರ ಸರ್ಕಾರ ನಿರ್ಧರಿಸಿದ ರೀತಿಯಲ್ಲಿ ಮಾಡುವುದು ಸರ್ಕಾರದ ಹಿಡಿತದಲ್ಲಿ ಇದೆ. ಮಾನ್ಯ ಸದಸ್ಯರು ಹೇಳಂತೆ ವಿವಿಧ ಕಂಪನಿಗಳಿಗೆ ಬರೆದು ನಾವೇ ಖರೀದಿ ಮಾಡಬೇಕು ಮಂತ್ರು ಬೇರೆಯವರಿಗೆ ಕೊಡದಂತೆ ಮಾಡಬೇಕೆಂದು ಕೇಳಿದ್ದಾರೆ, ತಮಗೆ ಗೊತ್ತಿದಂತೆ ವ್ಯಾಪಾರ ಪ್ರವರ್ತನೆ ವರ್ತಕರಲ್ಲಿ ಹೆಚ್ಚು. ವ್ಯಾಪಾರದ ಕಡೆಗೆ ವರ್ತಕರು ಹೆಚ್ಚು ಗಮನ ಕೊಡುತ್ತಿದ್ದಾರೆ. ಸರ್ಕಾರದ ಮುಖಾಂತರು ಅವರ ವ್ಯಾಪಾರ ಮಾಡುವುದಕ್ಕೆ ಒಪ್ಪುವುದಿಲ್ಲ ಆದ್ದರಿಂದ ಏನಾದರೂ ನಮ್ಮ ನಿಯಂತ್ರಣ ಮಾಡುವುದಕ್ಕೆ, ಕಾಯಿದೆ ಮಾಡಲಿಕ್ಕೆ ಸಾಧ್ಯವೇ ಎಂದು ಸರ್ಕಾರದ ಪರಿಶೀಲನೆ ಮಾಡಲಿಕ್ಕೆ ಹತ್ತಿದೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ESTIMATES FOR PROVIDING WATER TO THE VILLAGES IN HASSAN CONSTITUENCY

873 SRI K. H. HANUME GOWDA (Hassan) :—

Will the Minister for Community Development and Social Welfare be pleased to state :—

(*a*) Whether estimates are prepared for providing water through Bore wells to Desakoppalu, Channangihalli, Huluvase and Kyavihalli Villages of Hassan Constituency ;

(*b*) how many years back the villages have contributed their share amount and represented the Government for implementing the scheme ;

(*c*) whether it has come to the notice of the Government that the people of these villages are put to hardship for want of drinking ;

(*d*) the reasons for delay in implementing these schemes ?